ಕ್ರಾಂತಿಯಕಿಡಿ
ಕಾಯಕಯೋಗಿ
KAYAKAYOGI-MORNING DAILY
ಕನ್ನಡ ದಿನಪತ್ರಿಕೆ
ಭಾನುವಾರ
04 ಜುಲೈ 2021

ವ್ಯಾಕ್ಸಿನೇಷನ್ ಒಂದು ದೊಡ್ಡ ಬೋಗಸ್, ನನ್ನ ಬಳಿ ದಾಖಲೆ ಇದೆ: ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್

ಬೆಂಗಳೂರು: ಕೊರೊನಾ ನಿರೋಧಕ ಲಸಿಕೆ ನೀಡಿಕೆ ಒಂದು ದೊಡ್ಡ ಬೋಗಸ್. ಇದಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳು ನನ್ನ ಬಳಿ ಇವೆ. ಈ ಬಗ್ಗೆ ಪ್ರತ್ಯೇಕ ಸುದ್ದಿಗೋಷ್ಠಿ ನಡೆಸಿ ಎಲ್ಲವನ್ನೂ ಹೇಳುತ್ತೇನೆ. ಈ ವಿಚಾರವಾಗಿ ಮಂತ್ರಿಗಳು ಹೇಳಿದ್ದೆಲ್ಲ ಬರೀ ಸುಳ್ಳು ಎಂದು ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಹೊಸ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಡಿಕೆಶಿ, ಪಕ್ಷ ಬಿಟ್ಟವರನ್ನು ಪಕ್ಷಕ್ಕೆ ವಾಪಸ್ ಕರೆತರುವ ವಿಚಾರವಾಗಿ ನಾನು ಪಕ್ಷ ಬಿಟ್ಟುಹೋದ ಆ 17 ಜನಕ್ಕೆ ಅಂತ ಹೇಳಿಲ್ಲ. ಯಾರೆಲ್ಲಾ ನಮ್ಮ ಪಕ್ಷಕ್ಕೆ ಬರಬೇಕು ಅಂತಿದ್ದಾರೆ ಅವರಿಗೆ ಹೇಳಿದ್ದೇನೆ. ಯಾರಿಗೆ ನಮ್ಮ ಲೀಡರ್ ಶಿಪ್, ನಮ್ಮ ಸಿದ್ಧಾಂತದ ಮತ್ತು ಪಕ್ಷದ ಬಗ್ಗೆ ಒಪ್ಪಿಗೆ ಇದೆಯೋ ಅವರೆಲ್ಲ ಅರ್ಜಿ ಹಾಕಬಹುದು. ಹಾಗೂ ಯಾರು ಬೇಕಾದ್ರೂ ಅರ್ಜಿ ಹಾಕಬಹುದು ಎಂದು ಡಿ.ಕೆ ಶಿವಕುಮಾರ್ ಹೇಳಿದ್ದಾರೆ.

ಎನ್‌ಟಿಎಂ ಶಾಲೆ ಮುಂದೆ ಮುಂದುವರಿದ ಪ್ರತಿಭಟನೆ

ಶಾಲೆಯೂ ಉಳಿಯಲಿ, ಸ್ಮಾರಕವೂ ನಿರ್ಮಾಣ ಆಗಲಿ ಎಂದು ಒತ್ತಾಯ

ಮೈಸೂರು: ಮಹಾರಾಣಿ ಮಾದರಿ (ಎನ್‌ಟಿಎಂ) ಶಾಲೆ ಉಳಿಸಿ ಹೋರಾಟ ಒಕ್ಕೂಟದ ವತಿಯಿಂದ ಇಲ್ಲಿನ ಎನ್‌ಟಿಎಂ ಸರ್ಕಾರಿ ಶಾಲೆಯ ಮುಂದೆ ಸತತ 6ನೇ ದಿನವಾದ ಶನಿವಾರವೂ ಪ್ರತಿಭಟನೆ ಮುಂದುವರಿದಿದೆ.

ಪ್ರತಿದಿನ ಒಂದೊಂದು ಸಂಘಟನೆ ನೇತೃತ್ವದಲ್ಲಿ ಪ್ರತಿಭಟನೆ ಜರುಗುತ್ತಿದ್ದು, ಶನಿವಾರ ಆಮ್ ಆದ್ಮಿ ಪಾರ್ಟಿ (ಎಎಪಿ) ನೇತೃತ್ವದಲ್ಲಿ ಧರಣಿ ನಡೆಯಿತು.

ಸ್ವಾಮಿ ವಿವೇಕಾನಂದರ ಸ್ಮಾರಕಕ್ಕೆ ಪಕ್ಷದ ವಿರೋಧವಿಲ್ಲ. ಆದರೆ ಐತಿಹಾಸಿಕ ಮಹತ್ವ ಇರುವ ಎನ್ ಟಿಎಂ ಶಾಲೆಯನ್ನು ಕೆಡವಿ ಸ್ಮಾರಕ ನಿರ್ಮಾಣ ಮಾಡುವುದಕ್ಕೆ ವಿರೋಧ ಇದೆ ಎಂದು ಎಎಪಿ ಜಿಲ್ಲಾ ಸಂಚಾಲಕಿ ಮಾಲವಿಕ ಗುಬ್ಬಿವಾಣಿ ಹೇಳಿದರು.

ರಾಮಕೃಷ್ಣ ಆಶ್ರಮದವರು ಶಾಲೆಯನ್ನು ಕೆಡವಿ ಸ್ಮಾರಕ ನಿರ್ಮಾಣ ಮಾಡುವ ಹಟವನ್ನು ತೊರೆಯಬೇಕು. ಶಾಲೆಯೂ ಉಳಿಯಲಿ, ಸ್ಮಾರಕವೂ ನಿರ್ಮಾಣ ಆಗಲಿ ಎಂದು ಒತ್ತಾಯಿಸಿದರು.

ಸಂಸದರ ವಿರುದ್ಧ ಆಕ್ರೋಶ: ಶಾಲೆಯನ್ನು ಕೆಡವಿ ಸ್ಮಾರಕ ನಿರ್ಮಾಣ ಮಾಡಬೇಕು ಎಂದು ಹೇಳಿರುವ ಸಂಸದರಾದ ಪ್ರತಾಪ್ ಸಿಂಹ ಮತ್ತು ಶ್ರೀನಿವಾಸ ಪ್ರಸಾದ್ ವಿರುದ್ಧ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಸಂಕಷ್ಟ ಕುಟುಂಬಕ್ಕೆ ತಿಂಗಳ ಔಷಧ ನೀಡಿ ನೆರವಾದ ದಾನಿ

ಚಾಮರಾಜನಗರ : ಕೊರೊನಾ ಸಂಕಷ್ಟದ ಸಂದರ್ಭದಲ್ಲಿ ಹೃದಯ ಚಿಕಿತ್ಸೆ ಪಡೆದ ಮಹಿಳೆ ಮಾತ್ರೆ ಕೊಳ್ಳಲು ತೊಂದರೆಯಲ್ಲಿದ್ದ ಕುಟುಂಬಕ್ಕೆ ನಿವೃತ್ತ ಮುಖ್ಯ ಶಿಕ್ಷಕ ವಿ.ರಾಜೇಂದ್ರ ಅವರು ಒಂದು ತಿಂಗಳ ಔಷಧ, ಮಾತ್ರೆಗಳನ್ನು ನೀಡುವ ಮೂಲಕ ನೆರವಾಗಿದ್ದಾರೆ.

ನಗರದ ಬಡ ಕುಟುಂಬದ ಮಹಿಳೆಗೆ ಇತ್ತೀಚೆಗೆ ಹೃದಯ ಶಸ್ತ್ರ ಚಿಕಿತ್ಸೆ ಆಗಿತ್ತು.ನಂತರ ಅದಕ್ಕೆ ಸಂಬಂಧಿಸಿದ ಮಾತ್ರೆಗಳನ್ನು ಕೊಳ್ಳಲು ಸಂಕಷ್ಟದಲ್ಲಿದ್ದನ್ನು ಗಮನ ಹರಿಸಿದ ತಾಲ್ಲೂಕಿನ ಹೆಬ್ಬಸೂರು ಗ್ರಾಮದ ನಿವೃತ್ತ ಶಿಕ್ಷಕ ವಿ.ರಾಜೇಂದ್ರ ಅವರು ಒಂದು ತಿಂಗಳ ಔಷಧ ವಿತರಿಸಿ ನೆರವಾಗಿದ್ದಾರೆ.

ವ್ಯಕ್ತಿ ನಾಪತ್ತೆ

ಮದ್ದೂರು : ಮದ್ದೂರು ಪಟ್ಟಣದ ಹೊಳೇಬೀದಿ ನಿವಾಸಿ ಲೇ.ಎಚ್. ಪುಟ್ಟಲಿಂಗಯ್ಯ ಅವರ ಪುತ್ರ ಬಿ.ಪಿ. ತಮ್ಮಣ್ಣ(42) ಕಳೆದ ನಾಲ್ಕು ದಿನಗಳಿಂದ ಕಾಣೆಯಾಗಿರುವ ಬಗ್ಗೆ ಮದ್ದೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಿ.ಪಿ. ತಮ್ಮಣ್ಣ ಅವರ ಸಹೋದರ ಬಿ.ಪಿ. ರವಿ ಅವರು ಮದ್ದೂರು ಪೊಲೀಸ್ ಠಾಣೆಯಲ್ಲಿ ತಮ್ಮ ಸಹೋದರ ಕಳೆದ ನಾಲ್ಕು ದಿನಗಳ ಹಿಂದೆ ಮನೆಯಿಂದ ಹೊರ ಹೋದವರು ವಾಪಸ್ ಆಗದ ಬಗ್ಗೆ ಸಂಬಂಧಿಕರೂ ಸೇರಿದಂತೆ ಪರಿಚಯದ ಸ್ಥಳಗಳಲ್ಲಿ ಹುಡುಕಿ ಸಿಕ್ಕಿಲ್ಲವೆಂದು ದೂರಿನಲ್ಲಿ ತಿಳಿಸಿದ್ದಾರೆ.

ಕಾಣೆಯಾಗಿರುವ ವ್ಯಕ್ತಿ ಮಾತು ಬಾರದ ಅಂಗವೈಕಲ್ಯದಿಂದ ಬಳಲುತ್ತಿದ್ದು ಸದರಿ ವ್ಯಕ್ತಿ ಪತ್ತೆಯಾದಲ್ಲಿ ಮದ್ದೂರು ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 08232–232170 ಅಥವಾ ಸಹೋದರ ಬಿ.ಪಿ. ರವಿ ಮೊ. ಸಂಖ್ಯೆ 9844705591ಗೆ ಸಂಪರ್ಕಿಸುವಂತೆ ಮದ್ದೂರು ಪೊಲೀಸರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಕಾಣೆಯಾದವರ ಪತ್ತೆಗಾಗಿ

ಮಂಡ್ಯ : ಮಂಡ್ಯ ಜಿಲ್ಲೆಯ, ಸುನಿತಾ ಟಿ.ಸಿ (47) ಎಂಬುವವರು ಜೂನ್ 30 ರಂದು ಬೆಳಗ್ಗೆ 7:30 ರ ಸಮಯದಲ್ಲಿ ಕಾಣೆಯಾಗಿದ್ದಾರೆ ಎಂದು ಮಂಡ್ಯ ಪೂರ್ವ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಾಣೆಯಾದ ಮಹಿಳೆಯು 5.4 ಎತ್ತರ,ದುಂಡು ಮುಖ ಗೋಧಿ ಬಣ್ಣ ,ಸಾಧಾರಣ ಶರೀರ, ಹೊಂದಿದ್ದು, ಶ್ರೀರಂಗಪಟ್ಟಣ ಪ್ರಥಮ ದರ್ಜೆ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ಕನ್ನಡ, ಇಂಗ್ಲಿಷ್, ತಮಿಳ್ ಭಾಷೆ ಮಾತನಾಡುತ್ತಾರೆ. ಕಾಣೆಯಾದ ದಿನದಂದು ನೀಲಿ ಬಣ್ಣದ ಚೂಡಿದಾರ್ ಧರಿಸಿರುತ್ತಾರೆ. ಕಾಣೆಯಾದ ಮಹಿಳೆಯ ಸುಳಿವು ಸಿಕ್ಕಲ್ಲಿ ಸಿಕ್ಕಲ್ಲಿ ಮಂಡ್ಯ ಪೂರ್ವ ಪೊಲೀಸ್ ಠಾಣೆಗೆ ಸಂಪರ್ಕಿಸಬಹುದೆಂದು ಮಂಡ್ಯ ಪೂರ್ವ ಪೊಲೀಸ್ ಠಾಣೆಯ ಠಾಣಾಧಿಕಾರಿ ತಿಳಿಸಿದ್ದಾರೆ.

ಸಿಡಿಮದ್ದು, ದ್ವಿಚಕ್ರ ವಾಹನ ವಶಕ್ಕೆ

ಮದ್ದೂರು : ಅರಣ್ಯ ಪ್ರದೇಶದಲ್ಲಿ ವನ್ಯ ಜೀವಿಗಳನ್ನು ಹತ್ಯೆ ಮಾಡಲು ಮುಂದಾಗಿದ್ದ ಇಬ್ಬರು ಆರೋಪಿಗಳನ್ನು ಮತ್ತು ಹತ್ಯೆಗೆ ಬಳಸಲು ಮುಂದಾಗಿದ್ದ ಸಿಡಿಮದ್ದು ಹಾಗೂ ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿರುವ ಘಟನೆ ತಾಲೂಕಿನ ಮಲ್ಲನಾಯಕನಹಳ್ಳಿ ಗ್ರಾಮದಲ್ಲಿ ನಿನ್ನೆ ಬೆಳಿಗ್ಗೆ ಜರುಗಿದೆ.

ಮದ್ದೂರು ತಾಲೂಕಿನ ಕೊಪ್ಪ ಹೋಬಳಿಯ ಉಪಾರದೊಡ್ಡಿ ಕೊಪ್ಪಲು ಗ್ರಾಮದ ಚಿಕ್ಕಣ್ಣ(35) ಹಾಗೂ ಮಂಜುನಾಥ್(18) ಎಂಬ ಇಬ್ಬರು ಆರೋಪಿಗಳನ್ನು ಮದ್ದೂರು ಪ್ರಾದೇಶಿಕ ವಲಯದ ಅಧಿಕಾರಿಗಳು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಮಲ್ಲನಾಯಕನಹಳ್ಳಿ ಗ್ರಾಮದ ಅರಣ್ಯ ಪ್ರದೇಶದಲ್ಲಿ ಜಿಂಕೆ, ಕಾಡುಹಂದಿ, ಮೊಲ, ನವಿಲು, ಹಾಗೂ ಇನ್ನಿತರೆ ಕಾಡು ಪ್ರಾಣಿಗಳನ್ನು ಬೇಟೆಯಾಡಲು ಸಿಡಿಮದ್ದುಗಳನ್ನು ಅಳವಡಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ಪಡೆದ ಅಧಿಕಾರಿಗಳು ಜಿಲ್ಲಾ ಉಪಸಂರಕ್ಷಣಾಧಿಕಾರಿ ರವಿಶಂಕರ್ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಶಿಧರ್ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ಕೈಗೊಂಡು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ವನ್ಯ ಜೀವಿಗಳನ್ನು ಬೇಟೆಯಾಡಲು ಮುಂದಾಗಿದ್ದ ಆರೋಪಿಗಳನ್ನು ಮದ್ದೂರು ಪ್ರಾದೇಶಿಕ ವಲಯದ ಅಧಿಕಾರಿಗಳು ವಶಕ್ಕೆ ಪಡೆದಿರುವುದು.

ಬಂಧಿತ ವ್ಯಕ್ತಿಗಳಿಂದ ಹತ್ಯೆಗೆ ಬಳಸುತ್ತಿದ್ದ 10 ಸಿಡಿಮದ್ದು, ಎರಡು ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆದ ಬಳಿಕ ನ್ಯಾಯಲಯಕ್ಕೆ ಹಾಜರುಪಡಿಸಿದ್ದು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆ ವೇಳೆ ವಲಯಾಧಿಕಾರಿ ರವಿ, ಉಪ ವಲಯಾಧಿಕಾರಿ ರತ್ನಾಕರ್, ಅರಣ್ಯ ರಕ್ಷಕರಾದ ಸುದರ್ಶನ್, ವೆಂಕಟೇಶ್, ಸಿದ್ದಯ್ಯ ಹಾಜರಿದ್ದರು.

ಕಾಣೆಯಾದವರ ಪತ್ತೆಗಾಗಿ

ಮಂಡ್ಯ : ಮಂಡ್ಯ ಜಿಲ್ಲೆಯ, ಕೊತ್ತತ್ತಿ ಹೋಬಳಿಯ, ಕಬ್ಬನಹಳ್ಳಿ ಗ್ರಾಮದ ನಿಂಗೇಗೌಡ(60) ಎಂಬುವವರು ಜೂನ್ 27 ರಂದು ಬೆಳಗ್ಗೆ 8:30 ರ ಸಮಯದಲ್ಲಿ ಕಾಣೆಯಾಗಿದ್ದಾರೆ ಎಂದು ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಾಣೆಯಾದ ವ್ಯಕ್ತಿಯು 172 ಸೆ.ಮೀ ಎತ್ತರ, ಸಾಧಾರಣವಾದ ಶರೀರ, ಎಣ್ಣೆಗೆಂಪು ಮೈಬಣ್ಣ ಹೊಂದಿದ್ದು, ಮೀಸೆ ಬಿಟ್ಟಿರುತ್ತಾರೆ ಮತ್ತು ಕೂದಲನ್ನು ಕ್ರಾಪ್ ಬಾಚುತ್ತಾರೆ. ಕನ್ನಡವನ್ನು ಮಾತನಾಡುತ್ತಾರೆ. ಕಾಣೆಯಾದ ದಿನದಂದು ಬಿಳಿ ಪಂಚೆ ಬಿಳಿ ಶರ್ಟ್ ಕಪ್ಪು ಬಣ್ಣದ ನಿಕ್ಕರ್ ಧರಿಸಿರುತ್ತಾರೆ.

ಕಾಣೆಯಾದ ವ್ಯಕ್ತಿಯ ಸುಳಿವು ಸಿಕ್ಕಲ್ಲಿ ಸಿಕ್ಕಲ್ಲಿ ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆ:08232–224200 ಗೆ ಅಥವಾ ಪೊಲೀಸ್ ಕಂಟ್ರೋಲ್ ರೂಂ, ಜಿಲ್ಲಾ ಪೊಲೀಸ್ ನಿಯಂತ್ರಣ ಕೊಠಡಿ: 08232–224200 ಗೆ ಮತ್ತು ಮೊಬೈಲ್ ಸಂಖ್ಯೆ: 9480804847 ಗೆ ಸಂಪರ್ಕಿಸಬಹುದೆಂದು ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಬಿಜೆಪಿ ಆಡಳಿತದಲ್ಲಿ ಕಾನೂನು ಎಂಬುದು 'ಪುಸ್ತಕದ ಬದನೆಕಾಯಿ'ಯಾಗಿದೆ: 'ಕೈ' ಆರೋಪ

ಬೆಂಗಳೂರು: ವಂಚನೆ ಪ್ರಕರಣದಲ್ಲಿ ಶ್ರೀರಾಮುಲು ಅವರ ಪಿಎ ಬಂಧಿಸಿದ ವೇಗದಲ್ಲಿಯೇ ಬಿಡುಗಡೆಗೊಳಿಸಿದ್ದು ರಾಜ್ಯದಲ್ಲಿ ಪೊಲೀಸರಿಗೆ ಸ್ವತಂತ್ರವಿಲ್ಲದ ವಾತಾವರಣಕ್ಕೆ ಸಾಕ್ಷಿಯಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಕರ್ನಾಟಕ ಕಾಂಗ್ರೆಸ್ ಅಧಿಕೃತ ಟ್ವಿಟ್ಟರ್ ಹ್ಯಾಂಡಲ್ ನಲ್ಲಿ ಈ ಬಗ್ಗೆ ಟ್ವೀಟ್ ಮಾಡಲಾಗಿದ್ದು, ಸಚಿವ ಶ್ರೀರಾಮುಲು ಪಿ ಎ ವಿರುದ್ಧ ಎಫ್ ಐಆರ್ ಆಗಿದ್ದರೂ ಕೋರ್ಟಿಗೆ ಹಾಜರು ಪಡಿಸದೆ ಬಿಡುಗಡೆಗೊಳಿಸಿದ್ದು ಏಕೆ? ಪ್ರಭಾವ ಬೀರಿದ್ದು ಯಾರು? ಬಿಜೆಪಿ ಆಡಳಿತದಲ್ಲಿ ಕಾನೂನು ಎಂಬುದು ಪುಸ್ತಕದ ಬದನೆಕಾಯಿಯಾಗಿದೆ ಎಂದು ಟೀಕಿಸಿದೆ.

ಅರೆಸ್ಟ್ ಮಾಡಿ ಎಂದಾಗ ಅರೆಸ್ಟ್ ಮಾಡುವುದು, ಬಿಡುಗಡೆ ಮಾಡಿ ಎಂದಾಗ ಬಿಡುಗಡೆ ಮಾಡುವುದಕ್ಕೆ ಪೊಲೀಸರು ವಿಜಯೇಂದ್ರ ಮನೆಯ ಕಾಲಾಳುಗಳಂತಗಿದ್ದಾರೆಯೇ? ಎಫ್ ಐಆರ್ ದಾಖಲಾಗಿದ್ದರೂ ಆರೋಪಿಯನ್ನ ಬಿಡುಗಡೆ ಮಾಡುವುದರ ಹಿಂದೆ ಭ್ರಷ್ಟ ಹಣದ "ಸೆಟಲ್ಮೆಂಟ್" ನಡೆದಿರುವಂತಿದೆ. ಬಸವರಾಜ್ ಬೊಮ್ಮಾಯಿ ಅವರೇ, ಪೊಲೀಸ್ ಇಲಾಖೆ ನಿಮ್ಮ ಪಕ್ಷದ ಅನುಕೂಲಕ್ಕೆ ಇರುವುದೇ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ಆಸೆಗಿಂತ ಅರಿವು ಮುಖ್ಯ

ಹಿರಿಶಾಂತವೀರ ಸ್ವಾಮೀಜಿ

ಜಗತ್ತಿನಲ್ಲಿ ಅನೇಕರು ತಮ್ಮ ಸಿರಿವಂತಿಕೆ ಕುರಿತು ಜಂಭ ಕೊಚ್ಚಿಕೊಳ್ಳುತ್ತಾರೆ. ಗಳಿಸಿದ ಹಣ, ಬೆಳ್ಳಿ, ಬಂಗಾರ ಸಂಪತ್ತನ್ನು ಒಂದು ದಿನ ವೈರಿ ಅಥವಾ ಕಳ್ಳ ದೋಚಬಹುದು. ಮನುಷ್ಯ ಸಾಯುವಾಗಲೂ ಗಳಿಸಿದ ಸಂಪತ್ತನ್ನು ಕುಟುಂಬದ ಸದಸ್ಯರಿಗೆ ಬಿಟ್ಟು ಹೋಗುತ್ತಾನೆ.

'ಗಳಿಸಿದ ಹಣವೆಲ್ಲ ಕೂಡಿಟ್ಟೆ, ಸತ್ ಪಾತ್ರದ ಹಾದಿಯ ನೀ ಬಿಟ್ಟೆ, ಬೇಡ ಪರರ ಚಿಂತೆ ನಾಳೆ ಯಮ ಕೇಳಿದರೆನಂತೆ..' ಎಂದು ಅನುಭವಿಗಳ ಮಾತು ನಿಜಕ್ಕೂ ಸತ್ಯ. ಯಾರೇ ಆಗಲಿ ತಮ್ಮಲ್ಲಿರುವ ಬೇಡವಾದ ವಸ್ತುಗಳನ್ನು ದಾನ ಕೊಡುವುದು ಸ್ವಾಭಾವಿಕ. ಆದರೆ ತನಗೆ ಅಗತ್ಯದ ವಸ್ತುವನ್ನು ಇನ್ನೊಬ್ಬರಿಗೆ ಕೊಡಲು ಹಿಂಜರಿಕೆಯಾಗುತ್ತದೆ. ಅತಿಯಾದ ಸಂಪತ್ತು ಅವನತಿಗೆ ದೂಡಬಹುದು ಎಂಬ ಅರಿವು ಇದ್ದರೂ ಆಸೆ ಎಂಬ ದೈತ್ಯ ಅದನ್ನು ಮರೆಮಾಚುತ್ತದೆ.

ಸಂತರು, ಮಹಾಂತರು, ದಾರ್ಶನಿಕರು ಇದನ್ನು 'ನೆಚ್ಚಿ ಕೆಡಬೇಡ' ಎಂದು ಅರಿತು ಮಹಾ ಜ್ಞಾನಿಗಳಾಗಿರುವುದನ್ನು ಕಾಣುತ್ತೇವೆ. ಬುದ್ಧ, ಮಹಾವೀರ, ಯೇಸು, ಪೈಗಂಬರ, ಬಸವಾದಿ ಶಿವಶರಣರು ತಮ್ಮ ನುಡಿ ತೋರಣಗಳ ಮೂಲಕ ಇದು ಯಾವುದು ನಿನ್ನದಲ್ಲ ಎಲ್ಲದೂ ಭಗವಂತನದು, ನೀನು ಈ ಭೂಮಿಗೆ ಅತಿಥಿ ಎಂದು ಸಾರಿದ್ದಾರೆ. ಇದನ್ನರಿತು ನಾವು ನಡೆಯದಿದ್ದರೆ ಕಷ್ಟಗಳ ಸರಮಾಲೆ ನಮ್ಮ ಕೊರಳಿಗೆ ನಿಶ್ಚಿತ.

– **ಹಿರಿಶಾಂತವೀರ ಮಹಾಸ್ವಾಮಿ,** ಗವಿಮಠ, ಹೂವಿನಹಡಗಲಿ

ಸರ್ಕಾರಿ ಗೌರವದಿಂದ ಗುಂಡ್ಲುಪೇಟೆ ಯೋಧನ ಅಂತ್ಯಕ್ರಿಯೆ

ವರದಿ: ವಿಶ್ವನಾಥ ಬಿ.ಆರ್

ಚಾಮರಾಜನಗರ : ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಅಣ್ಣೂರು ಕೇರಿ ಗ್ರಾಮದ ಸಿಆರ್ ಪಿಎಫ್ ಯೋಧ ಶಿವಕುಮಾರ್(31) ಅವರ ಅಂತ್ಯಕ್ರಿಯೆ ಶನಿವಾರದಂದು ಸಕಲ ಸರ್ಕಾರಿ ಗೌರವಗಳಿಂದ ಮೃತ ಯೋಧನ ಜಮೀನಿನಲ್ಲಿ ನಡೆಯಿತು.

ಶನಿವಾರ ಬೆಳಿಗ್ಗೆ ವೇಳೆ ಸೇನಾ ವಾಹನದಲ್ಲಿ ದೆಹಲಿಯಿಂದ ಗ್ರಾಮಕ್ಕಾಗಮಿಸಿದ ಪಾರ್ಥೀವ ಶರೀರವನ್ನು ಗ್ರಾಮಸ್ಥರು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಯುವಕರು ಕಂಬನಿಗರೆದು ಬರಮಾಡಿಕೊಂಡರು. ಬಳಿಕ, ಜಮೀನಿನಲ್ಲಿ ಯೋಧರ ಅಂತಿಮ ದರ್ಶನವನ್ನು ಚಾಮರಾಜನಗರ ಎಸ್ಪಿ, ಡಿವೈಸ್ಪಿ ಮತ್ತು ತಾಲೂಕು ಆಡಳಿತದ ಅಧಿಕಾರಿಗಳ ಪಡೆದು ಪುಷ್ಪನಮನ ಸಲ್ಲಿಸಿದ ನಂತರ ರಾಷ್ಟಗೀತೆ ಮತ್ತು ಗಾಳಿಯಲ್ಲಿ ಗುಂಡು ಹಾರಿಸಿ ಪೊಲೀಸರು ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನೆರವೇರಿದೆ.

ಅನಾರೋಗ್ಯ ಕಾರಣದಿಂದ ಊರಿಗೆ ವಾಪಸ್ ಮರಳುವಾಗ ಹೃದಯಾಘಾತದಿಂದ ಶುಕ್ರವಾರ ಶಿವಕುಮಾರ್ ಅಸುನೀಗಿದ್ದರು. ಸಾಯುವ ಕೆಲವೇ ತಾಸುಗಳ ಮುನ್ನ ತನ್ನ ಪತ್ನಿ, ದೊಡ್ಡಪ್ಪ ಅವರಿಗೆ ಕರೆ ಮಾಡಿ ಶೀಘ್ರವೇ ಊರಿಗೆ ಬರುವುದಾಗಿ ಹೇಳಿದ್ದರು. ಮೃತರಿಗೆ ತಂದೆ, ತಾಯಿ, ಪತ್ನಿ ಹಾಗೂ 3 ವರ್ಷ ಹಾಗೂ 9 ತಿಂಗಳ ಮಕ್ಕಳಿವೆ.

ದೇಶಮುಖ್ ಗೆ ಜು.5 ರಂದು ಹಾಜರಾಗುವಂತೆ ಸಮನ್ಸ್ ಜಾರಿಗೊಳಿಸಿದ ಇಡಿ

ಮುಂಬೈ:ಜುಲೈ 5 ರಂದು ಜಾರಿ ನಿರ್ದೇಶನಾಲಯ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶ್ಮುಖ್ ಅವರನ್ನು ಕರೆಸಿದೆ.

ಜುಲೈ 05 ರಂದು ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶ್ಮುಖ್ ಅವರ ಮುಂದೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ (ಇಡಿ) ಮತ್ತೊಮ್ಮೆ ಸಮನ್ಸ್ ಜಾರಿಗೊಳಿಸಿದೆ. ಇದು ದೇಶಮುಖ್ ಅವರಿಗೆ ಇಡಿ ನೀಡಿದ ಮೂರನೆಯ ಸಮನ್ಸ್ ಆಗಿದೆ, ಅವರು ಅನಾರೋಗ್ಯದ ಕಾರಣಗಳ ಕಾರಣದಿಂದ ಮತ್ತು ಸಾಕಷ್ಟು ದಾಖಲೆಗಳನ್ನು ಒದಗಿಸಿಲ್ಲ ಎಂಬ ಕಾರಣದಿಂದ ಹಿಂದಿನ ಎರಡು ಸಮನ್ಸ್ ಗಳನ್ನು ಬಿಟ್ಟುಬಿಟ್ಟಿದ್ದಾರೆ.ಅವರ ಸಹಚರರಾದ ಸಂಜೀವ್ ಪಾಲಂಡೆ ಮತ್ತು ಕುಂದನ್ ಶಿಂಧೆ ಜುಲೈ 06 ರವರೆಗೆ ಇಡಿ ಬಂಧನದಲ್ಲಿದ್ದಾರೆ. ಕೆಲವು ಶೆಲ್ ಸಂಸ್ಥೆಗಳ ಕಾರ್ಯಾಚರಣೆಯಲ್ಲಿ ಇಬ್ಬರ ಪಾತ್ರವನ್ನು ಇಡಿ ಪರಿಶೀಲಿಸುತ್ತಿದೆ.ಯಾವುದೇ 'ವಿಡಿಯೋ ಅಥವಾ ಆಡಿಯೋ' ಮಾಧ್ಯಮದ ಮೂಲಕ ತನಿಖೆಗೆ ಸೇರಲು ಸಿದ್ಧ ಎಂದು ಹೇಳಿದರು.

ನಾಗ್ಪುರದ ಅವರ ನಿವಾಸದಲ್ಲಿ ಶೋಧಿಸಿದ ನಂತರ ದೇಶ್ಮುಖ್ ಇಡಿ ಸಮನ್ಸ್ ಅನ್ನು ಬಿಟ್ಟುಬಿಟ್ಟಿದ್ದರು. ಅವರು ಹಣಕಾಸು ತನಿಖಾ ಸಂಸ್ಥೆಯ ಮುಂದೆ ಹಾಜರಾಗಲು ಹೆಚ್ಚಿನ ಸಮಯವನ್ನು ಕೋರಿದ್ದರು.ಜೂನ್ 26 ರಂದು ಇಡಿ ದೇಶ್ಮುಖ್ ಅವರ ವೈಯಕ್ತಿಕ ಕಾರ್ಯದರ್ಶಿ ಸಂಜೀವ್ ಪಾಲಂಡೆ ಮತ್ತು ವೈಯಕ್ತಿಕ ಸಹಾಯಕ ಕುಂದನ್ ಶಿಂಧೆ ಅವರನ್ನು 'ಹಫ್ತಾ' ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಿತ್ತು. ದೇಶಮುಖ್‌ನ ಇಬ್ಬರು ಅಧಿಕಾರಿಗಳ ರಿಮಾಂಡ್ ನಕಲಿನಲ್ಲಿ, ಡಿಸೆಂಬರ್ 2020 ಮತ್ತು ಫೆಬ್ರವರಿ 2021 ರ ನಡುವೆ ಬಾರ್ ಮಾಲೀಕರಿಂದ 4 ಕೋಟಿ ರೂ.ಗಳನ್ನು ಸಂಗ್ರಹಿಸಲಾಗಿದೆ ಎಂದು ದೆಹಲಿಯ ನಾಲ್ಕು ಶೆಲ್ ಕಂಪನಿಗಳ ಮೂಲಕ ನಾಗಪುರದ ದೇಶಮುಖ್ ಅವರ ಚಾರಿಟಬಲ್ ಟ್ರಸ್ಟ್‌ಗೆ ರವಾನಿಸಲಾಗಿದೆ ಎಂದು ಇಡಿ ಹೇಳಿದೆ.

ದೇಶೀಯ ಮುಖ್ (72), ಕೇಂದ್ರೀಯ ತನಿಖಾ ದಳ (ಸಿಬಿಐ) ಪ್ರಕರಣದ ಆಧಾರದ ಮೇಲೆ ಇಡಿ ತನಿಖೆಯನ್ನು ಎದುರಿಸುತ್ತಿದ್ದಾರೆ.ಏಕೆಂದರೆ ಮುಂಬೈನ ಮಾಜಿ ಪೊಲೀಸ್ ಆಯುಕ್ತ ಪರಮ್ ಬಿರ್ ಸಿಂಗ್ ಅವರು ಈಗ ಕಮಾಂಡೆಂಟ್ ಜನರಲ್ ಆಗಿರುವ ಪತ್ರದಲ್ಲಿ ಬರೆದಿರುವ ಆರೋಪದಲ್ಲಿ ಈ ಆರೋಪವಿದೆ.